ನೋಟೀಸ್.

ತಾರೀಖು 1ನೇ ನವೆಂಬರ್ 1884.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲಕಾಡು ಸಮೀಪದಲ್ಲಿರುವ ಅಕ್ಕೂರು ಗ್ರಾಮದಲ್ಲಿ ಕಲರಾ ಯಾನೆ ಉಖಾಲ್ ಜುಲಾಬ್ ವ್ಯಾಧಿಯು ವ್ಯಾಪಿಸಿರುವದರಿಂದ ತಲಕಾಡಿನಲ್ಲಿ ನಡಿಯುವ ಪಂಚಲಿಂಗ ದರುಶನಾರ್ಥವಾಗಿ ಹೋಗುವ ಜನಗಳಿಗೆ ಯಿದರಿಂದುಂಟಾಗುವ ಅಪಾಯವನ್ನು ಕುರಿತು ಯೆಚ್ಚರಿಸಿದೆ.

ಅಬ್ದುಲ್‌ಖಾದರ್, ಕೆ. ಬಿ.,
ಡೆಪ್ಯೂಟಿ ಕಮ್ಮಿಷನರ್ ವ ರಿಜಿಸ್ಟ್ರಾರ್.

ನಗರ ಡಿವೀರ್ಜ್.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 103.

ಮೃತಪಟ್ಟ ಚಿನಿವಾರ ಪಾಪಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮುಡ್ಲಿಗಿರೀವೆಂಕಟರಮಣಯ್ಯ, ಮೃತಪಟ್ಟ ಸದರೀ ಚಿನಿವಾರ ಪಾಪಯ್ಯನ ಮಗ ಮೈನರ್ ಶೇಷಗಿರಿಯಪ್ಪನಿಗೆ ಸೋದರ ಮೂವನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ತ್ರಿಂಗೇರಿ ಸ್ಥಳದ ಮುಡ್ಲಿಗಿರೀ ವೆಂಕಟರಮಣಯ್ಯನು ತ್ರಿಂಗೇರಿ ವಾಸಸ್ಥನಾಗಿ ಮೃತಪಟ್ಟ ಚಿನಿವಾರ ಪಾಪಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಮುಡ್ಲಿಗಿರೀ ವೆಂಕಟರಮಣಯ್ಯನ ಅರ್ಜೀಯನ್ನು 1884ನೇ ಇಸವಿ ನವಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿನಿವಾರ ಪಾಪಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 105.

ಮೃತಪಟ್ಟ ಹನುಮಂತ ಕೆಟ್ಟಿಯ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಕರಕೆಟ್ಟಿ ಹೆಂಡತಿ ಲಕ್ಷ್ಮಕ್ಕಮ್ಮ, ಮೃತಪಟ್ಟ ಸದರೀ ಹನುಮಂತಕೆಟ್ಟಿಗೆ ತಾಯಿಯು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಜೋಳದಾಳು ಸ್ಥಳದ ಲಕ್ಷ್ಮಕ್ಕಮ್ಮನು ಸದರೀ ಜೋಳದಾಳು ವಾಸಸ್ಥನಾಗಿ ಮೃತಪಟ್ಟ ಹನುಮಂತ ಕೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 3,962—12—0 ರೂಪಾಯಿಗಳ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಕ್ಕಮ್ಮನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಕೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು 4ನೇ ತಾರೀಖಿನಲ್ಲಿ ಕೋಟ್ಯು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ.